**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *05.03.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರವರಿಂದಃ**

. ಆರೋಪಿತನ ಪತ್ತೆಗಾಗಿ ನನ್ನನ್ನು ಮೌಖಿಕವಾಗಿ ನೇಮಿಸಿದ್ದರು. ನನ್ನೊಂದಿಗೆ ಪಿ.ಸಿ–1134 ಅಭಿಜಿತ್ ಇವರನ್ನು ನೇಮಿಸಿದ್ದರು. ಆ ದಿನಕಿಂತ ಮೊದಲು ನಾನು ಆರೋಪಿತನನ್ನು ನೋಡಿರಲಿಲ್ಲ. ಬಾತ್ಮಿದಾರರ ಮಾಹಿತಿ ಆಧಾರದ ಮೇಲೆ ನಾನು ಕೆ.ಆರ್.ಆಸ್ಪತ್ರೆ ಕಡೆಗೆ ಹೋಗಿದ್ದೆ. ಆ ಕಾಲಕ್ಕೆ ಆರೋಪಿ ರೈಲ್ವೇ ಸ್ಟೇಷನ್ ಇಂದ ಕೆ.ಆರ್.ಆಸ್ಪತ್ರೆಗೆ ಹೊಗುವ ರಸ್ತೆಯಲ್ಲಿ ಸಿಗ್ನಲ್ ಬಳಿಕ ಹೋಗುತ್ತಿದ್ದ. ಆ ದಿನ ಆರೋಪಿ ಧರಿಸಿದ್ದ ಬಟ್ಟೆಗಳ ಬಣ್ಣ ಯಾವುದು ಎಂದು ಹೇಳಲು ಆಗುವುದಿಲ್ಲ. ನಮ್ಮನ್ನು ನೇಮಿಸಿದಾಗ ಇನ್ಸ್‌ಪೆಕ್ಟರ್ ಆರೋಪಿಯ ಫೊಟೋ ತೋರಿಸಿದ್ದರಿಂದ ಮತ್ತು ಬಾತ್ಮಿದಾರರು ಹೇಳಿದ್ದರಿಂದ ಆರೋಪಿತನನ್ನು ಗುರುತಿಸಿದ್ದೆ. ಆ ಕಾಲಕ್ಕೆ ಆರೋಪಿತನೊಂದಿಗೆ ಬೇರೆ ಯಾರು ಇರಲಿಲ್ಲ. ಆ ದಿನ ಆರೋಪಿತನನ್ನು ವಶಕ್ಕೆ ಪಡೆದ ಬಗ್ಗೆ ನಾನು ಮಹಜರ್ ಮಾಡಿಲ್ಲ. ಆ ದಿನ ಮಮತಾ ಇವರ ಮೃತ ದೇಹ ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಇತ್ತು. ನಾವು ಆರೋಪಿತನನ್ನು ವಶಕ್ಕೆ ಪಡೆದು ತನಿಖಾಧಿಕಾರಿ ಮುಂದೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಹಿರಿಯ ಅಧಿಕಾರಿಗಳ ಆದೇಶದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*